# ತೋಳನಕೆರೆಯಲ್ಲಿ ಕಾಮನ್‌ಟರ್ನ್



■ ಚಿತ್ರ– ಲೇಖನ: **ಮಂಜುನಾಥ ಆರ್.ಗೌಡರ**

**ಕ**ಪ್ಪು ತಲೆ, ಬಿಳಿ ಮತ್ತು ಬೂದು ಮೈಬಣ್ಣ, ಕೇಸರಿ ಕೊಕ್ಕಿನ ಕಾಮನ್ ಟರ್ನ್ ಪಕ್ಷಿ ಅತ್ಯಂತ ದೂರ ವಲಸೆ ಹೋಗುವ ಪಕ್ಷಿ ಎಂದೇ ಹೆಸರುವಾಸಿ. ಉತ್ತರ ಅಮೆರಿಕಾ ಮತ್ತು ಯೂರೋಪಿನ ಕೆಲ ಪ್ರದೇಶಗಳಿಂದ ವಲಸೆ ಬರುವ ಈ ಪಕ್ಷಿಗಳು, ಈಚೆಗೆ ಹುಬ್ಬಳ್ಳಿಯ ತೋಳನಕೆರೆಯ ಸುತ್ತ ಕಾಣಿಸಿಕೊಂಡವು.

ಚಳಿಗಾಲದಲ್ಲಿ ಶೀತಗಾಳಿಯಿಂದ ರಕ್ಷಣೆ ಪಡೆಯಲು ಮತ್ತು ಆಹಾರ ಹುಡುಕುತ್ತಾ ಇವು ಸಮಶೀತೋಷ್ಣ ಪ್ರದೇಶದತ್ತ ವಲಸೆ ಬರುತ್ತವೆ. ಈ ಹಕ್ಕಿಗಳಲ್ಲಿ ಆರ್ಕ್ಟಿಕ್ ಟರ್ನ್ ಅತ್ಯಂತ ದೂರ ವಲಸೆ ಹೋಗುವ ಹಕ್ಕಿಗಳಲ್ಲೊಂದು. ಬ್ರಿಟನ್ನಿನ ಪೂರ್ವ ತೀರದ ಫಾರ್ನ್ ದ್ವೀಪಗಳಲ್ಲಿ ಪಟ್ಟಿ ತೊಡಿಸಲಾದ ಒಂದು ಆರ್ಕ್ಟಿಕ್ ಟರ್ನ್ ಮರಿ ಹಾರುತ್ತಾ  ಕೇವಲ ಮೂರು ತಿಂಗಳಲ್ಲಿ ಆಸ್ಟ್ರೇಲಿಯಾದ ಮೆಲ್ಬರ್ನ್ ನಗರ ತಲುಪಿತಂತೆ. ಇದು 22 ಸಾವಿರ ಕಿ.ಮೀ. ಗಿಂತಲೂ ಹೆಚ್ಚು ದೂರದ ಸಮುದ್ರ ಪ್ರಯಾಣವಾಗಿತ್ತು!

ಸಾಮಾನ್ಯವಾಗಿ 70 ಸಾವಿರ ಕಿ.ಮೀ ಮಾರ್ಗವನ್ನು ಕ್ರಮಿಸಿ ಇವು ವಿವಿಧ ಸಮಶೀತೋಷ್ಣ ಪ್ರದೇಶಗಳಿಗೆ ಹೋಗುತ್ತವೆ. ಇವುಗಳ ಮುಖ್ಯ ಆಹಾರ ಮೀನು. ಹಾರುತ್ತಿರುವಾಗಲೇ ಮೀನು, ಕೀಟಗಳನ್ನು ಹಿಡಿಯುವ ಕೌಶಲ ಇರುವ ಇವು 25ರಿಂದ 30 ವರ್ಷಗಳಷ್ಟು ದೀರ್ಘಾವಧಿಯವರೆಗೆ ಬದುಕುತ್ತವೆ. ಸುಮಾರು 3 ಸಾವಿರ ಮೀಟರ್ ಎತ್ತರದಲ್ಲಿ ಗಂಟೆಗೆ 43ರಿಂದ 54 ಕಿ.ಮೀ ವೇಗದಲ್ಲಿ ಹಾರಾಡುತ್ತವೆ.

ಕಾಮನ್ ಟರ್ನ್ ಪಕ್ಷಿಗಳು ಗಂಡು ಹೆಣ್ಣು ಎರಡೂ ಸೇರಿ ನೆಲದಲ್ಲಿ ಸಾಧಾರಣವಾದ ಹುಲ್ಲು, ಕಡ್ಡಿಗಳಿಂದ ಗೂಡು ನಿರ್ಮಿಸಿ ಮೊಟ್ಟೆ ಇಟ್ಟು ಕಾವು ಕೊಟ್ಟು ಮರಿ ಮಾಡುತ್ತವೆ. 31ರಿಂದ 35 ಸೆಂ.ಮೀ ಉದ್ದವಿರುವ ಈ ಹಕ್ಕಿಗಳು ವರ್ಷಕ್ಕೊಮ್ಮೆ ಭೂಮಿಯ ಉತ್ತರಾರ್ಧಗೋಲದ ತುದಿಯಾದ ಆರ್ಕ್‌ಟಿಕ್ ಪ್ರದೇಶದಿಂದ ದಕ್ಷಿಣಾರ್ಧಗೋಲದ ತುದಿಯಾದ ಅಂಟಾರ್ಕ್ಟಿಕಾವರೆಗೆ ವಲಸೆ ಹೋಗಿ ವಾಪಸ್ ಆಗುತ್ತವೆ. ●